

# ಯಕೃತ್‌ನ ಉರಿಯೂತ ಲಸಿಕೆಯೇ ಸೂಕ್ತ

**‘ಹೆಪಟೈಟಿಸ್ ಬಿ’ ಎಂಬ ವೈರಾಣುವಿನಿಂದ ಬರುವ ಯಕೃತ್‌ನ ಉರಿಯೂತ, ದೇಹದ ಕಾರ್ಯಕ್ಷಮತೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಇದರ ನಿವಾರಣೆಗೆ ಲಸಿಕೆ ಹಾಕಿಸಿಕೊಳ್ಳುವುದು ಸೂಕ್ತ.**

**■ ಉಮಾ ಅನಂತ್**

ಬೆಂಗಳೂರಿನ ಎಂಟು ವರ್ಷದ ಪುಟಾಣಿ ಯಶಸ್ವಿನಿಗೆ ಹೊಟ್ಟೆನೋವಿನ ಸಮಸ್ಯೆ. ಬೆಳಿಗ್ಗೆ ಎದ್ದ ಕೂಡಲೇ ಅಳಲು ಆರಂಭಿಸುವ ಯಶಸ್ವಿನಿ ಮೂತ್ರ ವಿಸರ್ಜನೆ ಮಾಡುವಾಗಲೂ ಉರಿ ಉರಿ ಎಂಬ ಪೇಚಾಟದ ಅನುಭವ. ಮೂತ್ರದ ಬಣ್ಣವೂ ಹಳದಿಯೋ ಹಳದಿ. ವೈದ್ಯರ ಬಳಿ ತೋರಿಸಿದಾಗ ಇದು ಜಾಂಡೀಸ್ ಎಂಬ ಅಭಿಪ್ರಾಯಕ್ಕೆ ಬಂದರು. ಉದರ ಸಂಬಂಧಿ ಕಾಯಿಲೆ ಎಂದು ಔಷಧಿ ಮಾಡಿದರೂ ಗುಣವಾಗದ ಈಕೆಯನ್ನು ತಜ್ಞ ವೈದ್ಯರ ಬಳಿ ಮತ್ತೊಮ್ಮೆ ತೋರಿಸಿದಾಗ ಹೆಪಟೈಟಿಸ್ ಬಿ ವೈರಾಣು ಸೋಂಕಿನಿಂದ ಈ ಸಮಸ್ಯೆ ಉಲ್ಬಣವಾಗಿರುವುದು ಪತ್ತೆಯಾಯಿತು.

ಯಕೃತ್‌ನಲ್ಲಿ ಕಾಣಿಸಿಕೊಳ್ಳುವ ಉರಿಯೂತವೇ ಹೆಪಟೈಟಿಸ್ ಬಿ ಎಂಬ ವೈರಾಣುವಿನಿಂದ ಬರುವ ಕಾಯಿಲೆ. ಹೆಪಟೈಟಿಸ್ ಎಂಬುದು ಒಂದು ರೀತಿಯ ವೈರಸ್. ಇದು ದೇಹವನ್ನು ತಲುಪಿ ಯಕೃತ್ತಿನಲ್ಲಿ (ಲಿವರ್) ಉರಿಯೂತ ಉಂಟು ಮಾಡುತ್ತದೆ. ಇಲ್ಲಿ ಉಂಟಾಗುವ ಉರಿಯೂತ ಇಡೀ ದೇಹದ ಕಾರ್ಯಕ್ಷಮತೆ ಮೇಲೆ ಪರಿಣಾಮ ಬೀರಲು ಪ್ರಾರಂಭಿಸುತ್ತದೆ.